(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಕರಿಯಣ್ಣ:- ಇನ್ನೂ ಶುರುವೇ ಮಾಡಿಲ್ಲ. ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಯಾವುದಕ್ಕೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ಸ್ವಲ್ಪ ತಡೆಯಿರಿ. ನನಗೆ ಮಾತನಾಡುವುದಕ್ಕೆ ಟೈಮ್ ಕೊಡಿ. ಈಗ ಬೆಳಿಗ್ಗೆ ಅಲ್ಲಿ ಸೇರಿದ್ದೆವು. ಏನೂ ತೀರ್ಮಾನವಾಗಲಿಲ್ಲ. ಪುನಃ ಇಲ್ಲಿ ಗಲಾಟೆಯಾಗುತ್ತಿದೆ. ನಾವೊಂದು ಕೆಲಸ ಮಾಡೋಣ ಮೂರು ಗಂಟೆಗೆ ಸೇರೋಣ. ಅಷ್ಟರಲ್ಲಿ ನಾನು ಅವರನ್ನು ಕರೆಸಿ ಮಾತನಾಡುತ್ತೇನೆ. ಮೂರು ಗಂಟೆಗೆ ಸೇರೋಣ. ಅಷ್ಟರಲ್ಲಿ ಕರೆಸಿ ನಾನು ಪುನಃ ಮಾತನಾಡುತ್ತೇನೆ. ಶಿವಕುಮಾರ್‌ರವರೇ, ದಯವಿಟ್ಟು ತಾವು ಬನ್ನಿ. ಮೂರು ಗಂಟೆಗೆ ಮತ್ತೆ ಸೇರೋಣ.

(ಸದನವು 12-17 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(3) ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ:- ಕೇಂದ್ರ ಸರ್ಕಾರವು ಬಿಜೆಪಿ ಕಾರ್ಯಕರ್ತರಿಗೆ ಪೆಟ್ರೋಲ್ ಬಂಕ್ ಇತ್ಯಾದಿ ಮಂಜೂರು ಮಾಡಿರುವ ಬಗ್ಗೆ (ಚರ್ಚೆ ಮುಂ.)

(ಸದನವು 3-30ಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

+ಶ್ರೀ ಪಿ.ಜಿ.ಆರ್ ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೇ, ನಿನ್ನೆ ದಿನ ಸಹ ಈ ಸದನದಲ್ಲಿ ಗುಪ್ತ ವಾರ್ತೆ ಇಲಾಖೆ ಸಲ್ಲಿಸಿರತಕ್ಕಂಥ ಒಂದು ಪತ್ರದ ಮೇಲೆ ಸುಮಾರು 5 ಗಂಟೆಗಳ ಕಾಲ ಚರ್ಚೆಯಾಯಿತು. ಆ ಚರ್ಚೆ ಪ್ರಾರಂಭವಾದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮಾನ್ಯ ಗೃಹ ಮಂತ್ರಿಗಳು ಇಂಟರ್ ವಿನ್ ಆಗಿ ಅವರು ಏನು 5 ಗಂಟೆಗಳ ಕಾಲ ಈ ಸದನದ ಸಮಯ ಖರ್ಚಾದ ಮೇಲೆ ಐದು ನಿಮಿಷ ಉತ್ತರ ಕೊಟ್ಟರು ದನ್ನು ಮೊದಲೇ ಕೊಟ್ಟಿದ್ದರೆ ಬಹುಶಃ 5 ಗಂಟೆ ಸಮಯ ಉಳಿಯುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಈಗ ಇದರಲ್ಲಿ ಇರತಕ್ಕಂಥಾದ್ದು ಭಾವನೆಗಳ ಪ್ರಶ್ನೆ. ಈಗ ಏನಾಗಬೇಕು ಎತ್ತಾಗಬೇಕು ಎನ್ನುವುದು ಅದೆಲ್ಲಾ ಪಾರ್ಲಿಮೆಂಟ್‌ನಲ್ಲಿ ಆಗಿದೆ. ಈಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ನಮಗೆ ಉಳಿದಿರತಕ್ಕಂಥಾದ್ದು ಇನ್ನು 24 ಗಂಟೆಗಳು ಅಷ್ಟೇ. ನಾಳೆ ಸಾಯಂಕಾಲದ ಒಳಗೆ ಇಷ್ಟೊಂದು ಬಿಲ್‌ಗಳನ್ನು ಪಾಸ್ ಮಾಡಬೇಕೆಂದು ಹೇಳುತ್ತಿದ್ದೀರಿ. ಇವರು ನಾವು ಧರಣಿ ಮಾಡಲೇಬೇಕು ಎಂದು ಕುಳಿತುಕೊಂಡಿದ್ದರೆ ಈ ಸನ್ನಿವೇಶದಲ್ಲಿ ನೀವು ಸಭೆಯನ್ನು ಮುಂದುವರಿಸಿಕೊಂಡು ಹೋದರೆ, ಮಾನ್ಯ ಸಭಾನಾಯಕರು ಇದರಲ್ಲಿ